Prajavani

**Postal stamp on L.V. prasad launched**

Edition: Bangalore   Clip Date: 11-September-2006   Page No: 9   Clip Height/Width: 17 cm/4 cm

# ಎಲ್.ವಿ. ಪ್ರಸಾದ್ ಸ್ಮರಣಾರ್ಥ ಅಂಚೆ ಚೀಟಿ

ಬೆಂಗಳೂರು: ಭಾರತ ಸರ್ಕಾರದ ಅಂಚೆ ಇಲಾಖೆ ಪ್ರಸಾದ್ ಗ್ರೂಪ್‌ನ ಎಲ್.ವಿ. ಪ್ರಸಾದ್ ಅವರು ಸಿನಿಮಾ ಪ್ರಪಂಚಕ್ಕೆ ನೀಡಿದ ಅತ್ಯದ್ಭುತ ಕೊಡುಗೆಯ ಸ್ಮರಣಾರ್ಥ ಅಂಚೆ ಚೀಟಿಯನ್ನು ಹೈದರಾಬಾದ್‌ನಲ್ಲಿ ಬಿಡುಗಡೆ ಮಾಡಿದೆ.

ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಕೇಂದ್ರ ಸಚಿವ ಡಾ. ಶಕೀಲ್ ಅಹಮದ್ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದರು. ಕೇಂದ್ರ ಕಲ್ಲಿದ್ದಲು ರಾಜ್ಯ ಸಚಿವ ಡಾ. ದಾಸರಿ ನಾರಾಯಣರಾವ್ ಮೊದಲ ಆಲ್ಬಂ ಸ್ವೀಕರಿಸಿದರು.

ಡಾ. ಶಕೀಲ್ ಅಹಮದ್ ಅವರು ಮಾತನಾಡಿ, ಎಲ್.ವಿ. ಪ್ರಸಾದ್ ಅವರು ತೆಲುಗು ಟಾಕಿಯ ಪ್ರಥಮ ತಾರೆ ಎಂದು ಅವರನ್ನು ಪ್ರಶಂಸಿಸಿದರು.

ಭಾರತೀಯ ಸಿನಿಮಾಗೆ ತಮ್ಮ ತಂದೆ ನೀಡಿದ ಕೊಡುಗೆಯನ್ನು ಗುರುತಿಸಿದ್ದಕ್ಕಾಗಿ ಸರ್ಕಾರವನ್ನು ಎಲ್.ವಿ. ಪ್ರಸಾದ್ ಅವರ ಮಗ ರಮೇಶ್ ಪ್ರಸಾದ್ ಶ್ಲಾಘಿಸಿದರು.

ಎಲ್.ವಿ. ಪ್ರಸಾದ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಲಭಿಸಿದ್ದು, ಭಾರತೀಯ ಸಿನಿಮಾ ರಂಗದ ಇತಿಹಾಸದಲ್ಲಿ ಪ್ರಖ್ಯಾತ ಹೆಸರು ಹೊಂದಿದ್ದಾರೆ.

ಆಂಧ್ರಪ್ರದೇಶದ ಗ್ರಾಮೀಣ ಪ್ರದೇಶದಲ್ಲಿ 1908 ರಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದ ಅವರು, ಕಠಿಣ ಪರಿಶ್ರಮದಿಂದ ಯಶಸ್ವಿ ನಾಯಕ, ನಿರ್ದೇಶಕ, ನಿರ್ಮಾಪಕ ಮತ್ತು ಕೈಗಾರಿಕೋದ್ಯಮಿ ಆದರು. ಗೃಹ ಪ್ರವೇಶಂ, ಇಲಾವೆಲ್ಪು, ಶಾರದಾ, ಮಿಲನ್, ಖಿಲೋನಾ, ದಾದಿಮಾ, ಮನೋಹರ, ಮಿಸ್ಸಮ್ಮಾ ಮತ್ತು ಏಕ್ ದುಜೆ ಕೆ ಲಿಯೆ ಅವರ ಪ್ರಖ್ಯಾತ ಸಿನಿಮಾಗಳು.